# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ಎಸ್.ಎಫ್.ಸಿ./ಟೆಂಡರು/ಪ್ಯಾಕೇಜ್/ವಿವ–11/2007–08 ದಿನಾಂಕ:– 02.07.2007.

## ಅಲ್ಪಾವಧಿ ಟೆಂಡರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ–2000 ರಂತೆ ಲೋಕೋಪಯೋಗಿ ಇಲಾಖೆ ಹಾಗೂ ಶಿರಸಿ ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಪಿ.ಡಬ್ಲ್ಯೂ.ಜಿ. 65 ಮತ್ತು ಪಿ.ಡಬ್ಲ್ಯೂ.ಜಿ 66ರಲ್ಲಿಯ ನಿಬಂಧನೆಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಮೊಹರಾದ ಲಕೋಟೆಯಲ್ಲಿ ಕಾಮಗಾರಿಯ ಹೆಸರನ್ನು ನಮೂದಿಸಿ ನಗರಸಭೆಯಲ್ಲಿಯ ಅಧಿಕೃತ ಟೆಂಡರು ಪೆಟ್ಟಿಗೆಯಲ್ಲಿ ದಿನಾಂಕ: **20.07.2007**ರಂದು ಸಂಜೆ: 4:30 ಗಂಟೆರೊಳಗಾಗಿ ಹಾಕುವುದು. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ಲಕೋಟೆಯನ್ನು ಈ ಕಚೇರಿಯಲ್ಲಿ ದಿನಾಂಕ: **20.07.2007**ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಅನಿವಾರ್ಯ ಕಾರಣಗಳಿಂದ ಟೆಂಡರನ್ನು ನಿಗದಿತ ದಿನಾಂಕದಂದು ತೆರೆಯಲಾಗದಿದ್ದಲ್ಲಿ ಟೆಂಡರು ತೆರೆಯುವ ದಿನಾಂಕವನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಗರಸಭೆಗೆ ಖುದ್ದಾಗಿ ಭೇಟಿ ನೀಡಿ ಪಡೆಯಬಹುದಾಗಿದೆ.

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 19.07.2007 (ಕಚೇರಿ ವೇಳೆಯಲ್ಲಿ)
2. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 20.07.2007 (ಸಂಜೆ 4:30 ಗಂಟೆ)
3. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ತೆರೆಯುವ ದಿನಾಂಕ : 20.07.2007 (ಸಂಜೆ 5:00 ಗಂಟೆಗೆ)

ಮೇಲ್ಕಂಡ ದಿನಾಂಕಗಳು ಸಾರ್ವಜನಿಕ ರಜೆಯ ದಿನಗಳಾಗಿದ್ದರೆ ಮುಂದಿನ ಕಚೇರಿಯ ಕೆಲಸದ ದಿನಗಳನ್ನು ಪರಿಗಣಿಸಲಾಗುವುದು.

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|
| **Package-1:** ನಗರಸಭೆ ವ್ಯಾಪ್ತಿಯಲ್ಲಿ ನೀರು ಸರಬರಾಜು ಕಾಮಗಾರಿಗಳು: (ಐಟಂವಾರು) | | 48.00 | 48,000-00 | 4,800+ (4% ತೆರಿಗೆ ಶುಲ್ಕ | 6 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ |
| 1 | ಸಾರ್ವಜನಿಕ ಪಂಡಿತ್ ಆಸ್ಪತ್ರೆಯ ಹಿಂಭಾಗದ ನೆಲಮಟ್ಟದ ಜಲಸಂಗ್ರಹಾಗಾರ ನವೀಕರಣ ಹಾಗೂ ಭದ್ರತೆ ಕಾರ್ಯ ಮಾಡುವುದು, ಹುತ್ಗಾರ್ ಐ.ಪಿ.ಎಸ್. ನಲ್ಲಿ ಹೊಸ ರೈಜಿಂಗ್ ಮೇನ್ ಕೊಳಾಯಿಯನ್ನು ಅಳವಡಿಸುವುದು, ಚೌಕಿಮಠ ಪ್ರದೇಶ ಕುಮಟಾ ರಸ್ತೆ ಸಹ್ಯಾದ್ರಿ ತಗ್ಗು ಪ್ರದೇಶ ಗಣೇಶನಗರ (ವಾಂಬೆ ಕಾಲೋನಿ) ವಡ್ಡರ್ ಓಣಿ ಪಿ.ವಿ.ಸಿ. ಕೊಳವೆ ಅಳವಡಿಸುವುದು, ನೀರು ಶುದ್ಧೀಕರಣ ಘಟಕದ ಪ್ರದೇಶದ ಸುತ್ತಲೂ ಆವರಣ ಗೋಡೆ ನಿರ್ಮಿಸುವುದು, ನಗರಸಭೆಯ ನೀರು ಸರಬರಾಜು ಕೊಳಾಯಿಗಳ ವಾಲ್ವಗಳಿಗೆ ಆರ್.ಸಿ.ಸಿ. ಛೇಂಬರ್ ಕಟ್ಟುವುದು, ನೀರು ಶುದ್ಧೀಕರಣ ಘಟಕದಲ್ಲಿರುವ ವಾಲ್ವಗಳ ಬದಲಾವಣೆ ಚಾನೆಲ್ ಕವರಿಂಗ್ ಹಾಗೂ | | | | | |

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|
| | ಛೇಂಬರ್ ದುರಸ್ತಿ ಮಾಡುವುದು, ಬಾಪೂಜಿನಗರ ಪ.ಜಾ:ಪ.ಪಂ. ವಸತಿ ಕಾಲೋನಿಗೆ ನೀರು ಪೂರೈಕೆ ಒತ್ತಡ ಸುಧಾರಣೆಗಾಗಿ ಮೇಲೆತ್ತರ ಜಲಸಂಗ್ರಹಾಗಾರ ನಿರ್ಮಾಣ. (2.00 ಲಕ್ಷ ಲೀ. ಸಾಮರ್ಥ್ಯದ 10.50 ಮೀ. ಸ್ಟೇಜ್). | | | | | |
| **Package-2: ನಗರಸಭೆ ವ್ಯಾಪ್ತಿಯಲ್ಲಿ ಶೌಚಾಲಯ ಹಾಗೂ ಮೂತ್ರಾಲಯಗಳ ನಿರ್ಮಾಣ: (ಐಟಂವಾರು)** | | 23.00 | 23,000-00 | 2,300+ (4% ತೆರಿಗೆ ಶುಲ್ಕ | 4 ತಿಂಗಳು (ಮಳೆಗಾಲ ಹೊರತುಪಡಿಸಿ) | 2ನೇ ದರ್ಜೆ ಹಾಗೂ ಮೇಲ್ಪಟ್ಟು |
| 1 | ನಗರಸಭೆ ಕಛೇರಿಯ ಹಿಂಭಾಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ. (ಪುರಷರ ಹಾಗೂ ಮಹಿಳೆಯರ), ಪಂಡಿತ್ ಸಾರ್ವಜನಿಕ ಗ್ರಂಥಾಲಯದ ಹಿಂಭಾಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ (ಪುರುಷರ ಹಾಗೂ ಮಹಿಳೆಯರ), ಉರ್ದು ಶಾಲೆ ಹಿಂಭಾಗದಲ್ಲಿ, ಟೆಲಿಫೋನ್ ಕಛೇರಿ ಹತ್ತಿರ ಯಲ್ಲಾಪುರ ನಾಕಾ, ಪದ್ಮಶ್ರೀ ಚಿತ್ರ ಮಂದಿರ ಹಾಗೂ ಅಂಚೆ ಕಛೇರಿ ಹಿಂಭಾಗದಲ್ಲಿ ಮೂತ್ರಾಲಯ ನಿರ್ಮಾಣ, ನೀರು ಶುದ್ಧೀಕರಣ ಘಟಕದಲ್ಲಿ ಶೌಚಾಲಯ ನಿರ್ಮಾಣ, ಗಾಂಧಿನಗರದಲ್ಲಿ ಬಾಲಕಿಯರ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರ ಹಾಸ್ಟೆಲ್ ಗಳಲ್ಲಿ ಶೌಚಾಲಯ ಹಾಗೂ ನೀರಿನ ಸೌಕಯ, ಯಲ್ಲಾಪುರ ರಸ್ತೆಯಲ್ಲಿರುವ ಹೆಣ್ಣುಮಕ್ಕಳ ಹಾಸ್ಟೆಲ್‌ನಲ್ಲಿ ಶೌಚಾಲಯ ಹಾಗೂ ನೀರಿನ ಸೌಕರ್ಯ. | | | | | |
| **Package-4: ನಗರಸಭೆ ವ್ಯಾಪ್ತಿಯಲ್ಲಿ ಸ್ಮಶಾನಗಳ ಸುಧಾರಣೆ, ಉದ್ಯಾನವನಗಳ ಅಭಿವೃದ್ಧಿ ಹಾಗೂ ಕೆರೆ ಅಭಿವೃದ್ಧಿ: (ಐಟಂವಾರು)** | | 28.00 | 28,000-00 | 2,800+ (4% ತೆರಿಗೆ ಶುಲ್ಕ | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ |
| 1 | ನೆಹರೂನಗರದಲ್ಲಿರುವ ಸ್ಮಶಾನಕ್ಕೆ ರಕ್ಷಣಾ ಗೋಡೆ, ಶೆಡ್ ನಿರ್ಮಾಣ, ವಿದ್ಯಾನಗರ ರುದ್ರಭೂಮಿಗೆ ರಕ್ಷಣಾ ಗೋಡೆ ನಿರ್ಮಾಣ ಹಾಗೂ ಶೆಡ್ ದುರಸ್ತಿ, ಕಲ್ಕುಣಿಯಲ್ಲಿರುವ ಸ್ಮಶಾನಕ್ಕೆ ಆವರಣ ಗೋಡೆ ನಿರ್ಮಾಣ, ಕಲ್ಕುಣಿಯಲ್ಲಿಯ ಕ್ರಿಶ್ಚಿಯನ್ ದಫನ ಭೂಮಿಗೆ ಆವರಣ ಗೋಡೆ ಕಟ್ಟುವುದು, ರಾಜರಾಜೇಶ್ವರಿ ಉದ್ಯಾನವನ (ಮುಸುಕಿನಬಾವಿ) ಅಭಿವೃದ್ಧಿ ಕೆಲಸ, ಶಂಕರ ಹೊಂಡ ಅಭಿವೃದ್ಧಿಪಡಿಸುವುದು. | | | | | |

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|
| | **Package-5: ನಗರಸಭೆ ವ್ಯಾಪ್ತಿಯಲ್ಲಿ ಕಟ್ಟಡಗಳ ನಿರ್ಮಾಣ: (ಐಟಂವಾರು)** | 84.50 | 84,500-00 | 8,450+ (4% ತೆರಿಗೆ ಶುಲ್ಕ | 9 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ |
| 1 | ನಿಲೇಕಣಿಯಲ್ಲಿರುವ ಮೀನು ಮಾರುಕಟ್ಟೆ ನಿರ್ಮಾಣ, ನಗರಸಭೆ ಸಿಬ್ಬಂದಿಗಳಿಗೆ ವಸತಿ ಗೃಹ ನಿರ್ಮಾಣ, ಪೌರಾಯುಕ್ತರ ವಸತಿ ಗೃಹ ನಿರ್ಮಾಣ, ನೀರು ಸರಬರಾಜು ವಿಭಾಗದ ಉಗ್ರಾಣ ನಿರ್ಮಾಣ, ಶಿರಸಿ–ಯಲ್ಲಾಪುರ ರಸ್ತೆಯಲ್ಲಿರುವ ನಗರಸಭೆ ಮಾಲೀಕತ್ವದಲ್ಲಿರುವ ಜಾಗೆಯಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ, ಬನವಾಸಿ ರಸ್ತೆಯಲ್ಲಿರುವ ನಗರಸಭೆಯ ಮಾಲೀಕತ್ವದ ಜಾಗೆಯಲ್ಲಿ ನೆಲಮಹಡಿಯಲ್ಲಿ ವಾಣಿಜ್ಯ ಸಂಕೀರ್ಣ ಹಾಗೂ ಮೊದಲನೇ ಅಂತಸ್ತಿನಲ್ಲಿ ವಾರ್ಡ ಕಛೇರಿ ನಿರ್ಮಾಣ, ಮಾರಿಕಾಂಬಾ ನಗರ, ಕೆ.ಹೆಚ್.ಬಿ. ಕಾಲೋನಿ, ಮರಾಠಿಕೊಪ್ಪದಲ್ಲಿ ಚಿಕ್ಕ ಅಂಗಡಿಗಳ (ಕಿಯೋಸ್ಕ್) ನಿರ್ಮಾಣ, ಪಿ.ಡಬ್ಲ್ಯೂ.ಡಿ. ವೃತ್ತ, ಅಶ್ವಿನಿ ವೃತ್ತ, ಕರಿಗುಂಡಿ, ಕೆ.ಹೆಚ್.ಬಿ. ಕಾಲೋನಿ (ಪವಾರ್ ಆಸ್ಪತ್ರೆ ಹತ್ತಿರ), ಜಿಲ್ಲಾ ಕ್ರೀಡಾಂಗಣ ಕೂಡು ರಸ್ತೆ ಅಗಸೇಬಾಗಿಲ ಹತ್ತಿರ ಹಾಗೂ ಯಲ್ಲಾಪುರ ನಾಕಾ ಹತ್ತಿರ ಬಸ್ ಶೆಲ್ಟರಗಳ ನಿರ್ಮಾಣ ಮಾಡುವುದು, ಪ್ರಾಣಿ ವಧಾಲಯ ನಿರ್ಮಾಣ, ರಾಯಪ್ಪ ಹುಲೇಕಲ್ ಶಾಲಾ ಸಮುಚ್ಛಯದ (ರಾಜೀವನಗರ ಪರಿಶಿಷ್ಟ ಪಂಗಡ ಜನರ ತರಬೇತಿ ಗೃಹದ ರಕ್ಷಣೆ ಉದ್ದೇಶಿತ) ಕುಸಿದ ಶಾಲಾ ಭಾಗವನ್ನು ಮರು–ಕಟ್ಟುವುದು, ನೆಹರೂನಗರದಲ್ಲಿರುವ ಡಾ: ಅಂಬೇಡ್ಕರ್ ಸೇವಾ ಸಮಿತಿ ಆವರಣದಲ್ಲಿ ಸಮುದಾಯ ಭವನ ನಿರ್ಮಾಣ ಹಾಗೂ ಕೆ.ಹೆಚ್.ಬಿ. ಕಾಲೋನಿ ಮತ್ತು ಕಸ್ತೂರಬಾನಗರದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ. | | | | | |
| | **Package-6: ನಗರಸಭೆ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಅಳವಡಿಕೆ: (ಐಟಂವಾರು)** | 8.00 | 16,000-00 | 800+ (4% ತೆರಿಗೆ ಶುಲ್ಕ | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ ಹಾಗೂ ಮೇಲ್ಪಟ್ಟು (ವಿದ್ಯುತ್ ಗುತ್ತಿಗೆದಾರರು) |
| 1 | ನಗರಸಭೆ ವ್ಯಾಪ್ತಿಯಲ್ಲಿ ಹೆಚ್ಚುವರಿ ಬೀದಿ ದೀಪಗಳ ಲೈನ್ ಹಾಗೂ ಟ್ಯೂಬ್ ಲೈಟ್ ಸೆಟ್ಟುಗಳನ್ನು ಅಳವಡಿಸುವುದು, ಮಾರಿಕಾಂಬಾ ದೇವಸ್ಥಾನದ ಮುಂಭಾಗದ ವೃತ್ತದಲ್ಲಿ ಹೈ–ಮಾಸ್ಟ್ ದೀಪ ಅಳವಡಿಸುವುದು. | | | | | |

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|
| **Package-10: ನಗರಸಭೆ ವ್ಯಾಪ್ತಿಯಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಹಾಗೂ ರಸ್ತೆ ಬದಿಯಲ್ಲಿ ಆರ್.ಸಿ.ಸಿ. ಚರಂಡಿ ನಿರ್ಮಾಣ: (ಐಟಂವಾರು)** | | 61.50 | 61,500-00 | 6,150+ (4% ತೆರಿಗೆ ಶುಲ್ಕ | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ |
| 1 | ಕುಡ್ಸೆಂಪ್ ಅಡಿಯಲ್ಲಿ ಸಮೃದ್ಧಿ ನಗರದವರೆಗೆ ಕಟ್ಟಿ ನಿಲ್ಲಿಸಿದ ಚರಂಡಿಯನ್ನು ಮುಂದುವರೆಸಿ ಕಟ್ಟುವುದು, ಶಾಂತಿನಗರದಲ್ಲಿ ಗಂಗಾ ನಿವಾಸದಿಂದ ಹುಬ್ಬಳ್ಳಿ ರಸ್ತೆಯವರೆಗೆ ಆರ್.ಸಿ.ಸಿ. ಚರಂಡಿ ನಿರ್ಮಿಸುವುದು. (ಕುಡ್ಸೆಂಪ್ ಯೋಜನೆಯಡಿಯಲ್ಲಿ ಕೈಬಿಟ್ಟ ಭಾಗ), ನೆಹರೂನಗರದಲ್ಲಿ ಪಿತೃ ಸ್ಮೃತಿ ನಿಲಯದಿಂದ ಹುಬ್ಬಳ್ಳಿ ಮುಖ್ಯ ರಸ್ತೆ ಚರಂಡಿಯವರೆಗೆ ಆರ್.ಸಿ.ಸಿ. ಚರಂಡಿ ನಿರ್ಮಿಸುವುದು, ಗಾಂಧಿನಗರದಲ್ಲಿ ಗಾಯತೊಂಡೆ ಮನೆಯಿಂದ ಗಣಪತಿ ಸಣ್ಣತಮ್ಮ ಮನೆಯವರೆಗೆ ಆರ್.ಸಿ.ಸಿ. ಚರಂಡಿ ನಿರ್ಮಿಸುವುದು, ದೈವಜ್ಞ ಕಲ್ಯಾಣ ಮಂಟಪದ ಬದಿಯ ರಸ್ತೆಗೆ ಆರ್.ಸಿ.ಸಿ. ಚರಂಡಿ ನಿರ್ಮಿಸುವುದು, ಮರಾಠಿಕೊಪ್ಪ ಪ್ರದೇಶದಲ್ಲಿ ರಾಮು ಮನೆಯ ಹತ್ತಿರ ವನಿತಾ ಮನೆಯ ಹತ್ತಿರ ಆರ್.ಸಿ.ಸಿ. ಸಿ.ಡಿ. ನಿರ್ಮಾಣ, ಹಾಲು ಹೊಂಡ ಬಡಾವಣೆಯಲ್ಲಿ ಸಂತೃಪ್ತಿ ನಿಲಯದಿಂದ ತಾರಾನಾ ನಿಲಯದವರೆಗೆ ಆರ್.ಸಿ.ಸಿ. ಚರಂಡಿ ನಿರ್ಮಿಸುವುದು, ಗಣೇಶನಗರ ಐ.ಬಿ. ಯಿಂದ ಗಣೇಶನಗರ ಮುಖ್ಯ ರಸ್ತೆಗೆ (ಹೊಸ ಬಸ್ ಸ್ಟ್ಯಾಂಡ್ ಪ್ರದೇಶ) ಬಲಬದಿ ಆರ್.ಸಿ.ಸಿ. ಚರಂಡಿ ಕಟ್ಟುವುದು. | | | | | |
| **Package-11: ನಗರಸಭೆ ವ್ಯಾಪ್ತಿಯಲ್ಲಿ ಬರುವ ಬಿಡ್ಕಿಬೈಲ್ ಅಭಿವೃದ್ಧಿಪಡಿಸುವುದು: (ಐಟಂವಾರು)** | | 49.00 | 49,000-00 | 4,900+ (4% ತೆರಿಗೆ ಶುಲ್ಕ | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ |
| 1 | ನಗರಸಭೆ ವ್ಯಾಪ್ತಿಯಲ್ಲಿ ಬರುವ ಸಿ.ಟಿ.ಎಸ್. ಸಂ. 2183 ಬಿಡಕಿಬೈಲನ್ನು ಸಿಮೆಂಟ್ ಕಾಂಕ್ರೀಟ್ ಹಾಸುವುದು. | | | | | |
| **Package-12: ನಗರಸಭೆ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ ವಸ್ತು ವಿಲೇವಾರಿ ಪ್ರದೇಶವನ್ನು ಅಭಿವೃದ್ಧಿಪಡಿಸುವುದು: (ಐಟಂವಾರು)** | | 20.00 | 30,000-00 | 2000+ (4% ತೆರಿಗೆ ಶುಲ್ಕ | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 2ನೇ ದರ್ಜೆ ಹಾಗೂ ಮೇಲ್ಪಟ್ಟು |
| 1 | ಪ್ರಸ್ತುತವಾಗಿ ಘನತ್ಯಾಜ್ಯ ವಸ್ತು ವಿಲೇವಾರಿ ಮಾಡುವ ಪ್ರದೇಶಕ್ಕೆ ಆವರಣ ಗೋಡೆ ಹಾಗೂ ಒಳ ರಸ್ತೆ ಸೌಕರ್ಯ ಒದಗಿಸುವುದು. | | | | | |

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|
| **Package-14: ನಗರಸಭೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಕಾಂಕ್ರೀಟ್ ಅಳವಡಿಸುವುದು: (ಐಟಂವಾರು)** | | 49.00 | 49,000-00 | 4,900+ (4% ತೆರಿಗೆ ಶುಲ್ಕ | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ |
| 1 | ಸಿ.ಪಿ. ಬಝಾರ್ ಮುಖ್ಯ ರಸ್ತೆಯಿಂದ ಟಿ.ವಿ. ಸ್ಟೇಷನ್ ರವರೆಗೆ ರಸ್ತೆಗೆ ಕಾಂಕ್ರೀಟ್ ಅಳವಡಿಸುವದು, ನಿಲೇಕಣಿ ಪ್ರದೇಶದಲ್ಲಿ ಮೋಹಿನಿ ಆಚಾರಿ ಮನೆಯಿಂದ ಸಂತ್ಯಾಗ್ ಡಿಸೋಜಾ ಮನೆಯುವರೆಗೆ ರಸ್ತೆಗೆ ಕಾಂಕ್ರೀಟ್ ಅಳವಡಿಸುವದು, ರಾಯರಪೇಟೆ ಮಾರುತಿ ದೇವಸ್ಥಾನದ ಬದಿಯ ರಸ್ತೆಗೆ ಕಾಂಕ್ರೀಟ್ ಅಳವಡಿಸುವದು, ವೀರಭದ್ರಗಲ್ಲಿ ರಸ್ತೆಯಿಂದ ಜಟಕಾ ದೇವಸ್ಥಾನದ ಪ್ರದೇಶದಲ್ಲಿ ಕುಂಬಾರ ಓಣಿ ರಸ್ತೆಗೆ ಕಾಂಕ್ರೀಟ್ ಅಳವಡಿಸುವುದು, ಗಣೇಶನಗರದ ಪ.ಜಾ:ಪ.ಪಂ. ಜನ ವಾಸಿಸುವ ವಾಂಬೆ ಕಾಲನಿಗೆ ಮಾರುತಿ ದೇವಸ್ಥಾನದಿಂದ ಪುಟ್ಟನಮನೆ ರಸ್ತೆಯವರೆಗೆ ರಸ್ತೆಗೆ ಕಾಂಕ್ರೀಟ್ ಆಳವಡಿಸುವುದು. ಕುಮಟಾ ರಸ್ತೆಯಿಂದ ರಾಯರಪೇಟೆಗೆ ಹೋಗುವ ಕೂಡು ರಸ್ತೆಗೆ ಕಾಂಕ್ರೀಟ್ ಅಳವಡಿಸುವುದು, ಮರಾಠಿಕೊಪ್ಪ ಪ್ರದೇಶದಲ್ಲಿ ವಡ್ಡರಕೇರಿ ರಸ್ತೆಗೆ ಕಾಂಕ್ರೀಟ್ ಅಳವಡಿಸುವುದು. | | | | | |

<u>ವಿಧಿಸಲಾಗಿರುವ ಪೂರ್ವ ಶರತ್ತುಗಳು:-</u>

1. ಗುತ್ತಿಗೆದಾರರು ಯಾವುದೇ ಶರತ್ತುಗಳನ್ನೊಳಗೊಂಡು ಸಲ್ಲಿಸಲಾಗುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

2. ಗುತ್ತಿಗೆದಾರರು ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವಾಗ ನೋಂದಣಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಮತ್ತು ಗುತ್ತಿಗೆದಾರರ ಪಾಸ್ ಪುಸ್ತಕವನ್ನು ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

3. ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯು ಮಳೆಗಾಲವನ್ನು ಹೊರತುಪಡಿಸಿ ಇರುತ್ತದೆ.

4. ಗುತ್ತಿಗೆದಾರರು ಅಂದಾಜು ಪತ್ರಿಕೆ ದರಕ್ಕಿಂತಲೂ ಕಡಿಮೆ ಸೂಚಿಸುವ ದರದ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಪೌರಾಯುಕ್ತರು, ನಗರಸಭೆ, ಶಿರಸಿರವರ ಪದನಾಮಕ್ಕೆ ತೆಗೆದು ಟೆಂಡರು ಜೊತೆಯಲ್ಲಿ ಸಲ್ಲಿಸತಕ್ಕದ್ದು.

5. ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುವ ಕಾಮಗಾರಿಯನ್ನಾಗಲೀ ಕಾಮಗಾರಿಯ ಯಾವುದೇ ಭಾಗದ ನಿರ್ವಹಣೆಯನ್ನಾಗಲೀ ಯಾವುದೇ ವ್ಯಕ್ತಿಗೆ ಜಿ.ಪಿ.ಎ. ಮೂಲಕವಾಗಲೀ ಅಥವಾ ಇನ್ನಿತರ ರೀತಿಯಲ್ಲಿ ಉಪ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದನ್ನು ನಿಷೇಧಿಸಲಾಗಿದೆ.

6. ಕಾಮಗಾರಿಗಳ ನಿರ್ವಹಣೆಗೆ ಅಗತ್ಯವಿರುವ ಸಿಮೆಂಟ್, ಉಕ್ಕು ಮತ್ತು ಇತರೇ ನಿರ್ಮಾಣ ಸಾಮಗ್ರಿಗಳನ್ನು ಗುತ್ತಿಗೆದಾರರೇ ಅವರ ಸ್ವಂತ ವೆಚ್ಚದಲ್ಲಿ ಖರೀದಿಸುವುದು ಮತ್ತು ಸದರಿ ಸಾಮಗ್ರಿಗಳಿಗೆ ಸಂಬಂಧಿಸಿದ ಅಗತ್ಯ ಗುಣ ನಿಯಂತ್ರಣ ಫಲಿತಾಂಶಗಳ ವರದಿಯನ್ನು ತಮ್ಮ ವೆಚ್ಚದಲ್ಲಿಯೇ ಪಡೆದು ಸಲ್ಲಿಸುವುದು.

7. ಗುತ್ತಿಗೆದಾರರು ಟೆಂಡರು ಅನುಮೋದನೆ ಪತ್ರವನ್ನು ಸ್ವೀಕರಿಸಿದ ಒಂದು ವಾರದೊಳಗೆ ಕರಾರು ಮಾಡಿಕೊಳ್ಳದಿದ್ದಲ್ಲಿ ಮತ್ತು ಕರಾರನ್ನು ಮಾಡಿಕೊಂಡ ಒಂದು ವಾರದೊಳಗೆ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರು ನಿಯಮಾನುಸಾರ ಕರಾರನ್ನು ರದ್ದುಗೊಳಿಸಲಾಗುವುದು. ಕಾಮಗಾರಿಯನ್ನು ನಿರ್ವಹಿಸಲು ಮರು–ಟೆಂಡರುಗಳನ್ನು ಕರೆದು ನಿಮ್ಮ ವೈಯಕ್ತಿಕ ಹೊಣೆ ಮತ್ತು ಹೆಚ್ಚುವರಿಯಾಗಿ ತಗಲುವ ಆರ್ಥಿಕ ವೆಚ್ಚವನ್ನು ನಿಮ್ಮಿಂದ ವಸೂಲಿ ಮಾಡಿಕೊಳ್ಳಲಾಗುವುದು.

8. ಸಕ್ಷಮ ಪ್ರಾಧಿಕಾರವು ಈ ಟೆಂಡರು ಪ್ರಕಟಣೆಯನ್ನಾಗಲೀ ಪ್ರಕಟಣೆಯಲ್ಲಿನ ಯಾವುದೇ ಅಥವಾ ಎಲ್ಲ ಕಾಮಗಾರಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

9. ಯಾವುದೇ ಕಾರಣಗಳಿಂದಾಗಿ ಟೆಂಡರು ನಮೂನೆಗಾಗಿ ಪಾವತಿಸಿರುವ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

10. ಈ ಕಾಮಗಾರಿಗಳಿಗೆ ಎರಡು ವರ್ಷಗಳ ಅವಧಿಯನ್ನು ಕಾಮಗಾರಿಗಳ ನ್ಯೂನ್ಯತೆಗಳ ಹೊಣೆಗಾರಿಕೆಯ ಅವಧಿಯನ್ನು ಕಡ್ಡಾಯವಾಗಿ ಅನ್ವಯಿಸಲಾಗುತ್ತದೆ. ಸದರಿ ಅವಧಿಯಲ್ಲಿ ಕಾಮಗಾರಿಯಲ್ಲಿ ಯಾವುದೇ ರೀತಿಯ ನ್ಯೂನ್ಯತೆಗಳು ಕಂಡುಬಂದಲ್ಲಿ ಭಾಗಶಃ ಅಥವಾ ಸಂಪೂರ್ಣವಾಗಿ ಅವುಗಳನ್ನು ಗುತ್ತಿಗೆದಾರರೇ ಅವರ ಸ್ವಂತ ವೆಚ್ಚದಲ್ಲಿ ಸರಿಪಡಿಸಿಕೊಡಬೇಕು. ಸದರಿ ಕಾಮಗಾರಿಯ ಮೊತ್ತದ ಶೇ. 5 ರಷ್ಟು ಮೊತ್ತವನ್ನು ನ್ಯೂನ್ಯತೆಗಳನ್ನು ಸರಿಪಡಿಸುವ ಅಥವಾ ನಿರ್ವಹಣಾ ಖಾತ್ರಿ ಮೊತ್ತವೆಂದು ಪರಿಗಣಿಸಿ ಗುತ್ತಿಗೆದಾರರಿಗೆ ಪಾವತಿಸುವ ಬಿಲ್ಲುಗಳಲ್ಲಿ ಮುರಿತಾಯ ಮಾಡಲಾಗುವುದು. ನ್ಯೂನ್ಯತೆಗಳ ಹೊಣೆಗಾರಿಕೆಯ ಅವಧಿ ಅಥವಾ ನಿರ್ವಹಣಾ ಖಾತ್ರಿ ಅವಧಿಗಳಲ್ಲಿ ಯಾವುದೋ ಹೆಚ್ಚೊ ಅದನ್ನು ಪರಿಗಣಿಸಿ ತಡೆಹಿಡಿಯಲಾಗಿದ್ದ ಹಣವನ್ನು ಹಿಂದಿರುಗಿಸಲಾಗುವುದು.

11. ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರು ನಿಗದಿಗೊಳಿಸಿದ ಕಾಲಮಿತಿಯೊಳಗಾಗಿ ಪೂರ್ತಿಗೊಳಿಸತಕ್ಕದ್ದು. ಕುಂಠಿತ ಪ್ರಗತಿಗೆ ಟೆಂಡರು ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗುವುದು.

12. ಕಾಮಗಾರಿಯ ಮೂರು ಹಂತದ ಛಾಯಾ ಚಿತ್ರಗಳನ್ನು (ಕಾಮಗಾರಿ ಪೂರ್ವದಲ್ಲಿ, ಕಾಮಗಾರಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ) ತಮ್ಮ ಸ್ವಂತ ಖರ್ಚಿನಲ್ಲಿ ತೆಗೆದು ಸಲ್ಲಿಸತಕ್ಕದ್ದು.

13. ಕಾಮಗಾರಿಯ ಸಂಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಕಾಮಗಾರಿ ಪ್ರಾರಂಭಿಸುವ ಪೂರ್ವದಲ್ಲಿಯೇ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಅಳವಡಿಸತಕ್ಕದ್ದು.

14. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಆಧ್ಯತೆಯನುಸಾರ ಕಾಮಗಾರಿಗಳಿಗೆ ಕಾರ್ಯಾದೇಶವನ್ನು ನೀಡಲಾಗುವುದು.

15. ಕಾಮಗಾರಿಗಳಿಗೆ ಸಲ್ಲಿಸಿದ ಗುತ್ತಿಗೆದಾರರ ಟೆಂಡರು ದರಗಳು ಒಂದು ವರ್ಷ (ಟೆಂಡರು ಕರೆದ ದಿನಾಂಕದಿಂದ) ಅವಧಿಯವರೆಗೆ ಸಿಂಧುತ್ವ ಹೊಂದಿರುತ್ತದೆ.

16. ಸರ್ಕಾರಿ ಆದೇಶ ಸಂ. ನ.ಅ.ಇ.–10/ಎಸ್.ಎಫ್.ಸಿ./2007, ದಿ: 19.01.2007ರ ಮೇರೆಗೆ ನಿಯೋಜಿತವಾಗುವ ಸಂಸ್ಥೆಯಿಂದ/ವ್ಯಕ್ತಿಗಳಿಂದ 3ನೇ ಪಾರ್ಟಿಯ ತಪಾಸಣೆ ಕಡ್ಡಾಯವಾಗಿದ್ದು ಪ್ರತಿ ಹಂತದಲ್ಲಿಯೂ 3ನೇ ಪಾರ್ಟಿಯು ತಪಾಸಣಾ ವರದಿಯಲ್ಲಿ ನೀಡುವ ನ್ಯೂನ್ಯತೆ ಹಾಗೂ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. 3ನೆ ಪಾರ್ಟಿಯ ತಪಾಸಣಾ ವರದಿಯು ವ್ಯತಿರಿಕ್ತವಾದ ಪಕ್ಷದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ನಿಮ್ಮದ್ದಾಗಿರುತ್ತದೆ. 3ನೇ ಪಾರ್ಟಿಯವರ ವರದಿಯಂತೆ, ನಗರಸಭೆಯಿಂದ ಕ್ರಮಜರುಗಿಸಲಾಗುವುದು. ಇಂತಹ ಸಂದರ್ಭದಲ್ಲಿ ತಗಲಬಹುದಾದ ಆರ್ಥಿಕ ನಷ್ಟಗಳಿಗೆ ನೀವೇ ನೇರ ಜವಾಬ್ದಾರರಾಗುತ್ತೀರಿ.

**(ಜಿ. ರಾಮದಾಸ್)** ಕೆ.ಎಮ್.ಎಸ್.
ಪೌರಾಯುಕ್ತರು,
ನಗರಸಭೆ, ಶಿರಸಿ.

ಆಡಳಿತಾಧಿಕಾರಿಗಳು,
ನಗರಸಭೆ, ಶಿರಸಿ.